**- 4 -**

**ಸಿ.ಸಿ. ಸಂಖ್ಯೆ 7133 / 2023**
**ಪಿ.ಡಬ್ಲೂ -01**

**ದಿನಾಂಕಃ 21.08.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಶ್ರೀ LG ಆರೋಪಿ ಪರ** ವಕೀಲರಿಂದ **.**

ಸರ್ವೆ ನಂ.141/1ರ ಜಮೀನು ನಿಮ್ಮ ಮಾವನವರಿಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿ ನಾವು 10 ವರ್ಷದ ಹಿಂದೆ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಜಮೀನು ಮೂಲ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಗಂಗಮ್ಮ , ಗೋಪಾಲಯ್ಯ ಎಂದು ನುಡಿಯುತ್ತಾರೆ. ಸದರಿ ಗೋಪಾಲಯ್ಯ ರವರು ಗಂಗಮ್ಮ ರವರಿಗೆ ಏನು ಆಗಬೇಕು ಎಂದರೆ ಸಾಕ್ಷಿ ಅಣ್ಣ ಎಂದು ನುಡಿಯುತ್ತಾರೆ. ಸದರಿ ಗೋಪಾಲಯ್ಯ ರವರ ತಂದೆ ಮತು ಗಂಗಮ್ಮ ರವರ ತಂದೆ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿ ಅಲ್ಲ ಗಂಗಮ್ಮರವರ ಯಜಮಾನರು ಮತ್ತು ಗೋಪಾಲಯ್ಯ ಅಣ್ಣ ತಮ್ಮಂದಿರು ಎಂದು ನುಡಿಯುತ್ತಾರೆ. ಸದರಿ ಗಂಗಮ್ಮ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಗಂಗಮ್ಮ ರವರು ಮರಣ ಹೊಂದಿದ ನಂತರ ಸದರಿ ಸರ್ವೆ ನಂ.141/1ರ ಜಮೀನು ಯಾರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಗೋಪಾಲಯ್ಯ ಎಂದು ನುಡಿಯುತ್ತಾರೆ. ಕರಾರುಪತ್ರವನ್ನು ನೀವು ಗಂಗಮ್ಮ ಜೀವಂತ ಇದ್ದಾಗ ಮಾಡಿಸಿಕೊಂಡಿರುತ್ತೀರೋ ಅಥವಾ ಮರಣ ಹೊಂದಿದ ನಂತರ ಮಾಡಿಸಿಕೊಂಡಿರುತ್ತೀರೋ ಎಂದರೆ ಸಾಕ್ಷಿ ಮರಣ ಹೊಂದಿದದ ನಂತರ ಎಂದು ನುಡಿಯುತ್ತಾರೆ. ಸದರಿ ಗಂಗಮ್ಮ ರವರ ಮರಣ ಪ್ರಮಾಣಪತ್ರವನ್ನು ಪೋರ್ಜರಿ ಮಾಡಿ ಮಾರಾಟ ಮಾಡಿರುತ್ತಾರೆ ಎಂದು ನಿಮ್ಮ ಯಜಮಾನರು ಕೆಲವು ವ್ಯಕ್ತಿಗಳ ವಿರುದ್ದ ಕೇಸನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮಗೆ ದೂರನ್ನು ಬರೆದುಕೊಟ್ಟಿರುವ ಜಯಾನಂದಸ್ವಾಮಿ ಮತ್ತು ಮಂಜುನಾಥ ಸದರಿ ಗಂಗಮ್ಮ ರವರ ಮರರಣ ಪ್ರಮಾಣಪತ್ರವನ್ನು ಪೋರ್ಜರಿ ಮಾಡಿ ಮಾರಾಟ ಮಾಡಿರುತ್ತಾರೆ ಎಂದು ಇದೇ ನ್ಯಾಯಾಲಯದಲ್ಲಿ ಕೆಲವು ವ್ಯಕ್ತಿಗಳ ವಿರುದ್ದ ಪಿಸಿಆರ್ ನಂ.31/2019 ರಂತೆ ಖಾಸಗಿ ದೂರನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮರಣ ಪ್ರಮಾಣಪತ್ರವನ್ನು ಪೋರ್ಜರಿ ಮಾಡಿರುತ್ತಾರೆ ಎಂದು ಲೋಕಾಯುಕ್ತದಲ್ಲೂ ಕೇಸು ನಡೆದಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಾನ್ಯ ಲೋಕಾಯುಕ್ತ ನ್ಯಾಯಾಲಯವು ವಿಚಾರಣೆಯನ್ನು ನಡೆಸಿ ಸದರಿ ಮರಣ ಪ್ರಮಾಣಪತ್ರವನ್ನು ಪೋರ್ಜರಿ ಮಾಡಿರುತ್ತಾರೆ ಎಂದು ಪುರಸಭೆ ಮುಖ್ಯಾಧಿಕಾರಿಯವರಿಗೆ ಸದರಿ ಮರಣ ಪ್ರಮಾಣಪತ್ರವನ್ನು ರದ್ದು ಮಾಡುವಂತೆ ದಿನಾಂಕ 16.03.2022 ರಂದು ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮರಣ ಪ್ರಮಾಣಪತ್ರದ ಆಧಾರದ ಮೇಲೆ ಗೋಪಾಲಯ್ಯ ರವರ ಹೆಸರಿಗೆ ಪಹಣಿ ಬಂದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಗಂಗಮ್ಮ ರವರು ಜೀವಂತ ಇದ್ದಾಗ ಸದರಿ ಸರ್ವೆ ನಂ .141/1 ರಲ್ಲಿ ಯಾರು ಸ್ವಾಧೀನ ಇದ್ದರು ಎಂದರೆ ಸಾಕ್ಷಿ ಗಂಗಮ್ಮ ಎಂದು ನುಡಿಯುತ್ತಾರೆ. ದಿನಾಂಕ 16.10.2018ರ ಮೊದಲು 1ನೇ ಆರೋಪಿಯು ಗೋಪಾಲಯ್ಯ , ನಿಮ್ಮ ಮಾವ ಮತ್ತು ಮಂಜುನಾಥ್ ರವರ ವಿರುದ್ದ ಅಸಲು ದಾವೆ ನಂ.262/2018 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಅಸಲು ದಾವೆ ನಂ.262/2018 ರಲ್ಲಿ ದಿನಾಂಕ 16.10.2018 ರಂದು ನೀವು ಜಮೀನನ್ನು ಉಳುಮೆ ಮಾಡುತ್ತಿದ್ದಿರಿ ಎಂದು ಪೋಟೋವನ್ನು ಹಾಜರು ಪಡಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಆರೋಪಿಗಳು ಕೋಸನ್ನು ಬೆಳೆದಿದ್ದರು , ನೀವು ಅಕ್ರಮವಾಗಿ ಪ್ರವೇಶಿಸಿ ಕಟಾವು ಮಾಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಅಸಲು ದಾವೆ ನಂ.262/2018 ರಲ್ಲಿ ಪೋಟೋ ಮತ್ತು ದಾಖಲೆಗಳ ಆಧಾರದ ಮೇಲೆ ನೀವು ಆರೋಪಿಗಳ ಜಮೀನಿನ ಸ್ವಾಧೀನಕ್ಕೆ ತೊಂದರೆ ಕೊಡಬಾರದು ಎಂದು ಆದೇಶ ಮಾಡಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ದಿನಾಂಕ 16.10.2018 ರಂದು ನೀವು ಆರೋಪಿಗಳು ಬೆಳೆಸಿದ್ದ ಬೆಳೆಯನ್ನು ರೋಟರಿ ಹೊಡೆಸಿ ನಾಶ ಮಾಡಿರುತ್ತೀರಿ ಎಂದು ಹಾಗೂ ನೀವು ಆರೋಪಿಗಳಿಗೆ ಹಲ್ಲೆ ಮಾಡಿರುತ್ತೀರಿ ಎಂದು ಆರೋಪಿಗಳು ನಿಮ್ಮ ವಿರುದ್ದ ದೂರನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ಮದ್ಯಂತರ ಆದೇಶ ಇದ್ದರು ನೀವು ಮಧ್ಯಂತರ ಆದೇಶವನ್ನು ಉಲ್ಲಂಘನೆ ಮಾಡಿದ್ದರಿಂದ ಮಾನ್ಯ ನ್ಯಾಯಾಲಯವು ಆರೋಪಿಗಳ ಪರವಾಗಿ ಪೋಲಿಸ್ ಪ್ರೊಟೆಕ್ಷನ್ ಆದೇಶ ಮಾಡಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ನ್ಯಾಯಾಲಯದ ಮದ್ಯಂತರ ಆದೇಶವನ್ನು ಉಲ್ಲಂಘನೆ ಮಾಡಿದ್ದರಿಂದ ಆರೋಪಿಗಳು ಮಿಸಲೇನಿಯಸ್ ನಂ.6/2020 ರಂತೆ ನ್ಯಾಯಾಲಯದ ಆದೇಶದ ಉಲ್ಲಂಘನೆಗಾಗಿ ಅರ್ಜಿ ಸಲ್ಲಿಸಿರುತ್ತರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮಾನ್ಯ ನ್ಯಾಯಾಲಯವು ಹೊರಡಿಸಿದ್ದ ಮಧ್ಯಂತರ ಆದೇಶದ ವಿರುದ್ದ ನೀವು ಮಾನ್ಯ ಜಿಲ್ಲಾ ನ್ಯಾಯಲಯ, ರಾಮನಗರದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯು ವಜಾ ಆಗಿರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ನಿಮ್ಮ ಮಾವ ರವರು ಆರೋಪಿಗಳ ವಿರುದ್ದ ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ನಂ .156/2025 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಅಸಲು ದಾವೆ ನಂ .156/2025 ರಲ್ಲಿ ನೀವು ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ವಜಾ ಮಾಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಮಧ್ಯಂತರ ಅರ್ಜಿಯ ಆದೇಶದ ವಿರುದ್ದ ನೀವು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಮಾಗಡಿಯಲ್ಲಿ ಎಂ ಎ ನಂ .10/2025 ರಂತೆ ಮೇಲ್ಮನವಿ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ , ನನ್ನ ಮೈದುನನಿಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ಎಲ್ಲಾ ದಾವೆಗಳಲ್ಲಿ ನಿಮ್ಮ ಮಾವ ಮತ್ತು ಮೈದುನರವರ ವಿರುದ್ದ ಆದೇಶವಾಗಿರುವುದರಿಂದ ಸದರಿಯವರು ನಿಮ್ಮನ್ನು ಮುಂದೆ ಬಿಟ್ಟು ಈ ಸುಳ್ಳು ದೂರನ್ನು ಕೊಡಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮಾಗಡಿ ಪೋಲಿಸರು ನಿಮಗೆ ನೋಟೀಸನ್ನು ನೀಡಿದ್ದರೂ ನಿಮ್ಮ ಮಾವ ಮತ್ತು ಮೈದುನ ಉದ್ದೇಶ ಪೂರ್ವಕವಾಗಿ ಹೇಳಿಕೆಯನ್ನು ಕೊಟ್ಟಿರುವುದಿಲಲ ಎಂದರೆ ಸಾಕ್ಷಿ ನಮಗೆ ನೋಟೀಸ್ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

ಏನು ವಿದ್ಯಾಬ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಎಸ್ ಎಸ್ ಎಲ್ ಸಿ ಎಂದು ನುಡಿಯುತ್ತಾರೆ. ನಿಮಗೆ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸಾಕ್ಷಿ ಸುಮಾರಾಗಿ ಬರುತ್ತದೆ ಎಂದು ನುಡಿಯುತ್ತಾರೆ. ನೀವು ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಾಗಡಿ ಪೋಲಿಸ್ ರವರು ನಿಮ್ಮ ದೂರಿನ ಕ್ರಮ ಕೈಗೊಳ್ಳದ ಬಗ್ಗೆ ಮೇಲಾಧಿಕಾರಿಗಳಿಗೆ ದೂರನ್ನು ಕೊಡಲು ಯಾರು ಹೇಳಿದ್ದರು ಎಂದರೆ ಸಾಕ್ಷಿ ನಾನೆ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಇದೇ ರೀತಿ ದೂರನ್ನು ಬರೆಯಬೇಕು ಎಂದು ನಿಮಗೆ ಯಾರು ಸಹಾಯ ಮಾಡಿರತ್ತಾರೆ ಎಂದರೆ ಸಾಕ್ಷಿ ನನ್ನ ಮೈದುನ ಎಂದು ನುಡಿಯುತ್ತಾರೆ. ನೀವು ಮತ್ತು ನಿಮ್ಮ ಮೈದುನ ಹೇಳಿದಹಾಗೆ ಟೈಪ್ ಮಾಡಿಸಿಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ರಾಜ್ಯ ಮಾನವಹಕ್ಕುಗಳ ಆಯೋಗ , ರಾಜ್ಯ ಮಹಿಳಾ ಆಯೋಗ ಮತ್ತು ಎಸ್ ಪಿ, ರಾಮನಗರ ರವರಿಗೆ ನೀವು ಮತುತ ನಿಮ್ಮ ಮೈದುನ ಸೇರಿ ದೂರನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮಾನವ ಹಕ್ಕುಗಳ ಆಯೋಗ , ಮಹಿಳಾ ಆಯೋಗ ಮತ್ತು ಎಸ್ ಪಿ ರಾಮನಗರ

ಕಛೇರಿಗೆ ವಿಚಾರಣೆಗಾಗಿ ನೀವು ಮತ್ತು ನಿಮ್ಮ ಮೈದುನ ಹೋಗಿರುತ್ತೀರಾ ಎಂದರೆ ಸಾಕ್ಷಿ ನಾನು ಹೋಗಿದ್ದಿರಲಿಲ್ಲ ನನ್ನ ಮೈದುನ ಹೋಗಿದ್ದರು ಎಂದು ನುಡಿಯುತ್ತಾರೆ. ಎಲ್ಲಾ ದೂರುಗಳು ಜಯಾನಂದಸ್ವಾಮಿ ಎಂಬ ಪತ್ರಕರ್ತರವರ ಕುಮ್ಮಕ್ಕಿನಿಂದ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಜಯಾನಂದ ಸ್ವಾಮಿಯೆ ದೂರನ್ನು ತಯಾರು ಮಾಡಿರುವುದರಿಂದ ಎಲ್ಲಾ ದೂರುಗಳಲ್ಲೂ ಸದರಿ ಜಯಾನಂದ ಸ್ವಾಮಿ ರವರ ಜೊತೆ ಹಾಜರಾಗುತ್ತೇನೆ ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ನಿಮ್ಮ ಮಾವನವರ ಹೆಸರಿಗೆ ಸದರಿ ಜಯಾನಂದಸ್ವಾಮಿಯೇ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನೋಂದಣಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆದ್ದರಿಂದಲೇ ಮಾಗಡಿ ಪೋಲಿಸ್ ಠಾಣೆಯವರು ನಿಮ್ಮ ಜೊತೆ ಸದರಿ ಜಯಾನಂದ ಸ್ವಾಮಿ ವಿರುದ್ದವೂ ಕೇಸನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಸದರಿ ಜಯಾನಂದ ಸ್ವಾಮಿ ವಿರುದ್ದ ಕೇಸನ್ನು ದಾಖಲಿಸಿದ್ದರಿಂದ ನೀವು ಮತ್ತು ನಿಮ್ಮ ಮನೆಯವರು ಪೋಲಿಸರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಪೋಲಿಸ್ ರವರು ನಿಮಗೆ ನೋಟೀಸ್ ನೀಡಿದ್ದರೂ ನೀವು ಸದರಿ ಜಯಾನಂದಸ್ವಾಮಿಯ ಕುಮ್ಮಕ್ಕಿನಿಂದ ಪೋಲಿಸ್ ತನಿಖೆಗೆ ಸಹಕರಿಸಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಎಲ್ಲಾ ದೂರುಗಳನ್ನೂ ಜಯಾನಂದಸ್ವಾಮಿಯೇ ತಯಾರು ಮಾಡಿದ್ದು ಅದಕ್ಕೆ ನೀವು ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಜಯಾನಂದ ಸ್ವಾಮಿ ವಿರುದ್ದ ದೂರನ್ನು ಕೊಟ್ಟಿದ್ದರಿಂದಲೇ ನಾವು ಎಲ್ಲಾ ದೂರನ್ನು ಕೊಟ್ಟಿರುತ್ತೇವೆ ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ದೂರಿನಲ್ಲಿ ಹೇಳಿದಂತೆ ಆರೋಪಿಗಳು ಯಾವುದೇ ಕೃತ್ಯವನ್ನು ಮಾಡದೇ ಇದ್ದರೂ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ನಿಮ್ಮ ವಿರುದ್ದ ದೂರನ್ನು ಕೊಟ್ಟಿದ್ದರಿಂದಲೇ ಸದರಿ ಜಯಾನಂದ ಸ್ವಾಮಿ ನಿಮ್ಮ ವಿರುದ್ದ ದೂರನ್ನು ಕೊಡಿಸಿರು ತ್ತಾರೆ ಎಂದರೇ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಎಲ್ಲಾ ವೈದ್ಯಕೀಯ ದಾಖಲೆಗಳನ್ನು ನೀವು ಸೃಷ್ಟಿಸಿಕೊಂಡಿದ್ದು ನೀವು ಯಾವುದೇ ಆಸ್ಪತ್ರೆಯಿಂದ ವೈದ್ಯಕೀಯ

ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸರ್ವೆ ನಂ.141/1ರಲ್ಲಿ ನಿಮ್ಮ ಕುಟುಂಬಕ್ಕೆ ಯಾವುದೇ ಹಕ್ಕು ಇರದೇ ಇದ್ದರೂ ಸದರಿ ಜಮೀನನ್ನು ಕಬಳಿಸಲು , ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**

**- 2 -**

**ಸಿ.ಸಿ. ಸಂಖ್ಯೆ 7133 / 2023**
**ಪಿ.ಡಬ್ಲೂ -02**

**ದಿನಾಂಕಃ 21.08.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಶ್ರೀ LG ಆರೋಪಿ ಪರ** ವಕೀಲರಿಂದ .

ಗಂಗಮ್ಮ ರವರು ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿ ಅತ್ತೆ ಎಂದು ನುಡಿಯುತ್ತಾರೆ. ಸದರಿಗಂಗಮ್ಮ ರವರು ದಿನಾಂಕ 20.11.2017 ರಂದು ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಗಂಗಮ್ಮ ರವರಿಗೆ ಮಕ್ಕಳು ಹಾಗೂ ಸ್ವಂತ ಅಣ್ಣ ತಮ್ಮಂದಿರು ಹಾಗೂ ಅಕ್ಕತಂಗಿಯರು ಯಾರೂ ಇರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ತಾತ ಹಾಗೂ ಗಂಗಮ್ಮ ರವರ ತಂದೆ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಗಂಗಮ್ಮ ರವರು ತಮ್ಮ ಜೀವಿತ ಕಾಲಾವಧಿಯಲ್ಲಿ ಗಂಗಸಿದ್ದಯ್ಯ ಮತ್ತು ಮಂಜುನಾಥ್ ರವರಿಗೆ ಏನಾದರೂ ಕರಾರು ಪತ್ರ ಬರೆದುಕೊಟ್ಟಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗಂಗಮ್ಮ ರವರು ಜೀವಂತ ಇದ್ದ ಕಾಲದಲ್ಲಿ ನಿಮ್ಮ ತಂದೆ ಗೋಪಾಲಯ್ಯ ರವರ ಹೆಸರಿಗೆ ಆರ್ ಟಿ ಸಿ ಏನಾದರೂ ಇತ್ತ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗಂಗಮ್ಮ ರವರು ಜೀವಂತ ಇದ್ದಾಗ ಸದರಿ ಜಮೀನನ್ನು ಮಾರಾಟ ಮಾಡಲು ನಿಮ್ಮ ತಂದೆಯವರಿಗೆ ಹಕ್ಕು ಏನಾದರೂ ಕೊಟ್ಟಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಗಂಗಮ್ಮರವರು ಮರಣ ಹೊಂದಿದ ನಂತರ ನಿಮ್ಮ ತಂದೆಯವರಿಗೆ ಯಾವ ದಾಖಲೆಗಳ ಆಧಾರದ ಮೇಲೆ ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ವಂಶವೃಕ್ಷ ಮತ್ತು ಆಧಾರ್ ಕಾರ್ಡ್ ಆಧಾರದ ಮೇಲೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರಿಗೆ ಅಣ್ಣ ತಮ್ಮಂದಿರು ಇದ್ದರ ಎಂದರೆ ಸಾಕ್ಷಿ ಇದ್ದರೂ ಆದರೆ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ನೀವೂ ಸಹ ದಿನಾಂಕ 04.05.2018 ರ ಕ್ರಯಪತ್ರಕ್ಕೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ

ಕ್ರಯಪತ್ರವನ್ನು ನೀವು ಓದಿ ತಿಳಿದುಕೊಂಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಧೃಡೀಕೃತ ನಕಲಿನ ಕ್ರಯಪತ್ರವನ್ನು ತೋರಿಸಲಾಗಿ ಸದರಿ ಕ್ರಯಪತ್ರದಲ್ಲಿ ದಿನಾಂಕ 05.11.2017 ರಂದು ಗೋಪಾಲಯ್ಯ ಮತ್ತು ನೀವು ಗಂಗಸಿದ್ದಯ್ಯ ರವರಿಗೆ ಕ್ರಯದ ಕರಾರುಪತ್ರ ಮಾಡಿಕೊಟ್ಟಿರುತ್ತೀರಿ ಎಂದು ಒಕ್ಕಣೆ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ **ಧೃಡೀಕೃತ ನಕಲಿನ ಕ್ರಯಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು.** ದಿನಾಂಕ 05.11.2017 ರಂದು ಗಂಗಮ್ಮ ರವರು ಜೀವಂತ ಇದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ 05.11.2017 ರಂದು ಸರ್ವೆ ನಂ .141/1ರ ಜಮೀನಿಗೆ ಸಂಬಂಧಪಟ್ಟಂತೆ ನಿಮ್ಮ ತಂದೆಯ ಹೆಸರಿಗೆ ಆರ್ ಟಿ ಸಿ ಅಥವಾ ಇತರೆ ದಾಖಲೆಗಳು ಇದ್ದವಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಯಾವ ದಿನಾಂಕದಂದು ಗಂಗಸಿದ್ದಯ್ಯ ರವರಿಂದ ಎಷ್ಟು ಹಣ ಪಡೆದಿರುತ್ತಾರೆ ಎಂದರೆ ಸಾಕ್ಷಿ ಸದರಿ ದಿನಾಂಕ 04.05.2018ರ ಧೃಡೀಕೃನ ನಕಲಿನ ಕ್ರಯಪತ್ರದಲ್ಲಿ ಇರುವ ಒಕ್ಕಣೆಯನ್ನು ನೋಡಿ ದಿನಾಂಕ 18.11.2017 ರಂದು ರೂ. 2 ಲಕ್ಷ ಹಣವನ್ನು ನನ್ನ ತಂದೆ ಗೋಪಾಲಯ್ಯ ರವರು ಪಡೆದಿರುತ್ತಾರೆ ಎಂದು ಇದೆ ಎಂದು ನುಡಿಯುತ್ತಾರೆ. ದಿನಾಂಕ 18.11.2017 ರಂದು ಗಂಗಮ್ಮ ರವರು ಸಪ್ತಗಿರಿ ಆಸ್ಪತ್ರೆ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಮರಣ ಹೊಂದಿದ್ದರು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಏನು ಎಂದರೆ ಸಾಕ್ಷಿ ಗಂಗಮ್ಮ ರವರ ಮರಣ ಪ್ರಮಾಣಪತ್ರ ಎಂದು ನುಡಿಯುತ್ತಾರೆ. ಸದರಿ **ಧೃಡೀಕೃತ ನಕಲಿನ ಮರಣ ಪ್ರಮಾಣಪತ್ರವನ್ನು ನಿಡಿ-2 ಎಂದು** ಗುರುತಿಸಲಾಯಿತು. ಗಂಗಮ್ಮ ರವರು ತಮ್ಮ ಜೀವಿತ ಕಾಲದಲ್ಲಿ ಸದರಿ ಸರ್ವೆ ನಂ .141/1ರ ಜಮೀನಿಗೆ ಸಂಬಂಧಪಟ್ಟಂತೆ ಏನೆಲ್ಲಾ ವ್ಯವಹಾರ ಮಾಡಿದ್ದರು ಎಂದು ನಿಮಗೆ ಮಾಹಿತಿ ಇದೆಯೆ ಎಂದರೆ ಸಾಕ್ಷಿ ಸ್ವಲ್ಪ ಇದೆ ಎಂದು ನುಡಿಯುತ್ತಾರೆ. ಗಂಗಮ್ಮ ರವರು ಮರಣ ಹೊಂದಿದ ನಂತರ ಅವರಿಗೆ ಮಕ್ಕಳು ಇರುವುದಿಲ್ಲ ನಾವೆ ವಾರಸುದಾರರು ಎಂದು ಯಾವುದಾದರೂ ನ್ಯಾಯಾಲಯದಲ್ಲಿ ದಾವೆಯನ್ನು

ಹಾಕಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಗಂಗಮ್ಮ ರವರು ತಮ್ಮ ಜೀವಿತ ಕಾಲಾವಧಿಯಲ್ಲಿ 1 ನೇ ಆರೋಪಿಗೆ ಸದರಿ ಜಮೀನಿನ ಸಂಬಂಧ ಭೋಗ್ಯಪತ್ರ ಮಾಡಿಕೊಟ್ಟಿದ್ದರು ಆ ಬಗ್ಗೆ ನಿಮಗೆ ಗೊತ್ತೆ ಎಂದರೆ ಸಾಕ್ಷಿ ಗೊತ್ತು ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಸದರಿ ಸರ್ವೆ ನಂ.141/1ರ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದರೂ ನೀವು ಮತ್ತು ನಿಮ್ಮ ತಂದೆ ಸದರಿ ಗಂಗಸಿದ್ದಯ್ಯ ಮತ್ತು ಮಂಜುನಾಥ್ ರವರಿಗೆ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಅವರು ಸ್ವಾಧೀನದಲ್ಲಿ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಆರೋಪಿಗಳು ಬೆಳೆದಿದ್ದ ಕೋಸನ್ನು ನೀವು ದಿನಾಂಕ 16.10.2018 ರಂದು ನಾಶಪಡಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ನಿಮ್ಮ ವಿರುದ್ದ ದೂರನ್ನು ಕೊಟ್ಟಿರುತ್ತಾರೆ ಎಂದು ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಪೋಲಿಸರು ನೋಟೀಸನ್ನು ಕೊಟ್ಟಿದ್ದರೂ ನೀವು ಉದ್ದೇಶಪೂರ್ವಕವಾಗಿ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ ಎಂದರೆ ಸಾಕ್ಷಿ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿಗಳು ಯಾವುದೇ ಕೃತ್ಯವನ್ನು ಮಾಡಿರುವುದಿಲ್ಲ , ಸದರಿ ಜಯಾನಂದ ಸ್ವಾಮಿ ಕುಮ್ಮಕ್ಕಿನಿಂದ ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಅಪರಾಧ ನಡೆದಿರುತ್ತದೆ ಹಾಗೂ ನಾನು ಯಾವುದೇ ಕುಮ್ಮಕ್ಕಿನಿಂದ ಸಾಕ್ಷ್ಯ ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಮಚ್ಚಿ ನಿಂದ ಮತ್ತು ದೊಣ್ಣೆಯಿಂದ ಯಾರಿಗೂ ಹಲ್ಲೆ ಮಾಡಿರುವುದಿಲ್ಲ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**